ಕೊಡಿ. ಅದರ ಬಗ್ಗೆ I will take action.

ಅಧ್ಯಕ್ಷರು: ಆಯಿತು.

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಈ ವಿಷಯವಾಗಿ ಚುಕ್ಕೆ ಗುರುತು ರಹಿತ ಪ್ರಶ್ನೆ ಕೇಳಿದ್ದೇನೆ. ಅವರು ಈ ಪ್ರಶ್ನೆಗೆ ಉತ್ತರವನ್ನು ಕೊಟ್ಟರೆ, ನಾವು point out ಮಾಡಬಹುದು. ಅವರು ಉತ್ತರ ಕೊಡದೇ ಹೋದರೆ ನಾವು ಹೇಗೆ point out ಮಾಡಬೇಕೆಂಬುದನ್ನು ಹೇಳಿ. ನಮ್ಮ ಹತ್ತಿರ ಖಾಸಗಿ ದಾಖಲೆಗಳು ಇರುತ್ತವೆ. ನಾನು ಈ ಖಾಸಗಿ ದಾಖಲೆಗಳನ್ನು ತಂದು ಮಾನ್ಯ ಮುಖ್ಯಮಂತ್ರಿಗಯವರ ಮುಂದೆ ಮಂಡನೆ ಮಾಡುವುದು ಸೂಕ್ತವಲ್ಲ. ದಯವಿಟ್ಟು ತಾವು ನನಗೆ ಅವರ ಇಲಾಖೆಯಿಂದ ಉತ್ತರವನ್ನು ಕೊಡಿಸಿ, ಅವರು ಯಾರ್ಯಾರಿಗೆ amend ಮಾಡಿದ್ದಾರೆ, ಹಳೆಯ layout approval revise ಮಾಡಿರುವಂಥದ್ದು, ಅದರ ಮಾಹಿತಿಯನ್ನು ನನಗೆ ಕೊಡಿಸಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ಆಯಿತು, ಕೊಡಿಸುತ್ತಾರೆ.

ಶ್ರೀ ಕೃಷ್ಣ ಭೈರೇಗೌಡ : ತಾವು ಶಾಸಕರಿಗೆ ಕೊಡುವುದಕ್ಕೆ ಆಗುವುದಿಲ್ಲವೆಂದರೆ R.T.I. ನಿಂದ ತೆಗೆದುಕೊಂಡು ಬರುತ್ತೇನೆ. ಆ ಪರಿಸ್ಥಿತಿ ಬರುವುದು ಬೇಡ, ತಾವು ದಯವಿಟ್ಟು ಉತ್ತರವನ್ನು ಕೊಡಿ.

ಅಧ್ಯಕ್ಷರು: ಆಯಿತು, ಮಾನ್ಯ ವಿರೋಧಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರ ಮೂರು ನಿಲುವಳಿ ಸೂಚನೆಗಳಿವೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಈಗ ಬಂದಿದ್ದೇನೆ. ಬೇರೆಯವರು ಮಾತನಾಡಲಿ, ನಾನು ಕೊನೆಯಲ್ಲಿ ಕೇಳುತ್ತೇನೆ.

ಅಧ್ಯಕ್ಷರು: ಆಯಿತು, ಮಾನ್ಯ ಗೂಳಿಹಟ್ಟಿ ಡಿ. ಶೇಖರ್‌ರವರೆ ಮಾತನಾಡಿ.

7. ವಿಷಯ: ವೃತ್ತಿ ಶಿಕ್ಷಣ ಸೀಟು ನೀಡುವ ವಿಚಾರದಲ್ಲಿ ವಂಚನೆಯಾಗಿರುವ ಬಗ್ಗೆ

ಶ್ರೀ ಗೂಳಿಹಟ್ಟಿ ಡಿ. ಶೇಖರ್: (ಹೊಸದುರ್ಗ): ಮಾನ್ಯ ಅಧ್ಯಕ್ಷರೆ, ಇವತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ಹುಬ್ಬಳ್ಳಿಯಿಂದ ಪ್ರಕಟಣೆಯಾಗಿರುವಂಥ "ತಾಂತ್ರಿಕ ಅಡಚಣೆ; ವೃತ್ತಿ ಶಿಕ್ಷಣ ಸೀಟು ವಂಚಿತೆ ಪುಷ್ಪಾ" ಎಂದು ವರದಿ ಬಂದಿದೆ. ಇದರ ಬಗ್ಗೆ ಮಾನ್ಯ

ಮುಖ್ಯಮಂತ್ರಿಯವರು ದಯಮಾಡಿ ಗಮನಿಸಬೇಕು. ಮಾನ್ಯ ಮುಖ್ಯಮಂತ್ರಿಯವರ ಕ್ಷೇತ್ರದಲ್ಲಿ ಪಿ.ಯು.ಸಿ. ಓದಿರುವಂಥ ವಿದ್ಯಾರ್ಥಿನಿಯಾಗಿದ್ದು, ಇವರು ಸಿ.ಇ. ಟಿಯಲ್ಲಿ 1,186 ಅಂಕ ಪಡೆದು 9ನೇ ರ್ಯಾಂಕ್ ಬಂದಿದ್ದಾಳೆ. ಈ ವಿದ್ಯಾರ್ಥಿನಿಗೆ ವೈದ್ಯಕೀಯ ಪ್ರವೇಶ ಮತ್ತು ತಾಂತ್ರಿಕ ಉನ್ನತ ಶಿಕ್ಷಣ ಪ್ರವೇಶ ನಿರಾಕರಿಸಿದ್ದಾರೆ. ಇದಕ್ಕೆ ಕಾರಣವೇನೆಂದರೆ, 7 ವರ್ಷಗಳು ಓದಿಲ್ಲವೆಂದು ಇದೆ. ಇವರ ತಂದೆ ನಾಟಕದ ಕಲಾವಿದರಾಗಿದ್ದು, ಇವರು ಊರಿಂದ ಊರಿಗೆ ಹೋಗುಂಥ ಸಂದರ್ಭದಲ್ಲಿ ಈ ವಿದ್ಯಾರ್ಥಿನಿ 7ನೇ ತರಗತಿಗೆ ನೇರವಾಗಿ ಸೇರಿ ಪಾಸಾಗಿರುವುದರಿಂದ 7,8,9,10 ಈ ರೀತಿಯಾಗಿ 6 ವರ್ಷಗಳು ಓದಿದ್ದು, ಪಿ.ಯು.ಸಿ. ಮತ್ತು ಸಿ.ಇ.ಟಿ.ಯಲ್ಲೂ ಚೆನ್ನಾಗಿ ಅಂಕಗಳನ್ನು ಪಡೆದಿದ್ದಾಳೆ. ಆದರೆ, ಇವಳು 7 ವರ್ಷ ಓದಿಲ್ಲವೆಂಬ ಒಂದೇ ಕಾರಣಕ್ಕೆ admission ಆಗುವುದಕ್ಕೆ ಸಿ.ಇ.ಟಿ. ಯಲ್ಲಿ ರ್ಯಾಂಕ್ ಪಡೆದಿದ್ದರೂ ಸಹಿತ ಇವಳಿಗೆ ಇಂಜಿನಿಯರಿಂಗ್‌ಗೂ ಅವಕಾಶ ಕೊಟ್ಟಿಲ್ಲ, ಮೆಡಿಕಲ್ ಗೂ ಅವಕಾಶ ಕೊಟ್ಟಿಲ್ಲ, ಮತ್ತೆ ಬಿ.ಎಸ್ಸಿ. ಪದವಿ ತರಗತಿಗೂ ಅವಕಾಶ ಕೊಟ್ಟಿಲ್ಲ. ಈ ನಿಯಾಮಾವಳಿಗಳನ್ನು ಸರ್ಕಾರ ಮಾಡುವುದು. ಸರ್ಕಾರ ಈ ವಿದ್ಯಾರ್ಥಿನಿಗೆ ಕೊಡಲೇ ಉನ್ನತ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಬೇಕು. ಈ ವಿದ್ಯಾರ್ಥಿನಿ ವೈದ್ಯಕೀಯ ಶಿಕ್ಷಣ ಅಥವಾ ತಾಂತ್ರಿಕ ಶಿಕ್ಷಣ ಯಾವುದನ್ನು ಆಯ್ಕೆ ಮಾಡುತ್ತಾರೋ ಅದನ್ನು ಕಲ್ಪಿಸಬೇಕು. ಸರ್ಕಾರ ಇವತ್ತೇನೆರವಿಗೆ ಬರಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಈಗ ಸರ್ಕಾರಿ ಸೀಟು ಪಡೆಯುವುದಕ್ಕೆ ಅಹರ್ತೆಯನ್ನು CET Council ನಲ್ಲಿ ನಿಗದಿ ಪಡಿಸಿದೆ. ಅದರಲ್ಲಿ ಅಭ್ಯರ್ಥಿ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿದ ವರ್ಷದ ಜುಲೈ ಮೊದಲನೇ ದಿನಾಂಕದಂದು ಕನಿಷ್ಠ ಪಕ್ಷ 7 ಶೈಕ್ಷಣಿಕ ವರ್ಷಗಳನ್ನು, ಅಂದರೆ ಮೊದಲನೇ ತರಗತಿಯಿಂದ 2ನೇ ವರ್ಷದ ಪಿ.ಯು.ಸಿ. ಯವರೆಗೆ ಕರ್ನಾಟಕ ರಾಜ್ಯದಲ್ಲಿರುವ ಒಂದು ಅಥವಾ ಹೆಚ್ಚಿನ ಸರ್ಕಾರಿ ಅಥವಾ ಸರ್ಕಾರದಿಂದ ಮನ್ನಣೆ ಪಡೆದಿರುವಂಥ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿರಬೇಕು. ಕರ್ನಾಟಕ ರಾಜ್ಯದಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಎಸ್.ಎಸ್.ಎಲ್. ಸಿ, 10ನೇ ತರಗತಿ ಅಥವಾ 12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಗೆ ಹಾಜರಾಗಿರಬೇಕು, ಮತ್ತು ತೇರ್ಗಡೆಯಾಗಿರಬೇಕು. ಅಭ್ಯರ್ಥಿ ಒಂದು ತರಗತಿಯಲ್ಲಿ ತೇರ್ಗಡೆ ಹೊಂದಲು ಒಂದು ವರ್ಷಕ್ಕಿಂತ ಹೆಚ್ಚು ಸಮಯಾವಕಾಶವನ್ನು ತೆಗೆದುಕೊಂಡರೆ ಶೈಕ್ಷಣಿಕ ಅಧ್ಯಯನ ವರ್ಷಗಳನ್ನು ಒಂದು ವರ್ಷವೆಂದು ಎಣಿಕೆ ಮಾಡಲಾಗುತ್ತದೆ.

ಇವರು ಉಲ್ಲೇಖ ಮಾಡಿರುವಂಥ ಪುಷ್ಪಾರವರು 7ನೇ ತರಗತಿಯನ್ನು direct ಆಗಿ ಕಟ್ಟಿ ಪಾಸಾಗಿದ್ದಾರೆ. ಅವರು ಏಳನೇ ತರಗತಿಯವರೆಗೂ ಎಲ್ಲೂ ವ್ಯಾಸಂಗ ಮಾಡಿಲ್ಲ. ಅದರ ನಂತರ ಮೂರು ವರ್ಷ ಹೈಸ್ಕೂಲು ಮತ್ತು ಎರಡು ವರ್ಷ ಪಿ.ಯು.ಸಿ. ವ್ಯಾಸಂಗ ಮಾಡಿದ್ದಾರೆ. ಏಳನೇ ತರಗತಿಯದೂ ಸೇರಿ ಒಟ್ಟು ಆರು ಶೈಕ್ಷಣಿಕ ವರ್ಷಗಳನ್ನು ಪೂರೈಸಿದ್ದಾರೆ. ಸರ್ಕಾರಿ ಸೀಟುಗಳನ್ನು ಪಡೆಯಲು ಈಗಿರುವ ನಿಯಾಮಾವಳಿಗಳ ಪ್ರಕಾರ ಏಳು ವರ್ಷ ಕಡ್ಡಾಯವಾಗಿ ನಮ್ಮ ರಾಜ್ಯದಲ್ಲಿ ವ್ಯಾಸಂಗ ಮಾಡಿರಲೇಬೇಕು. ಇದೊಂದು ವಿಶೇಷ ಪ್ರಕರಣವಾಗಿದೆ. ಈ ವಿಶೇಷ ಪ್ರಕರಣದ ಹಿನ್ನೆಲೆಯಲ್ಲಿ ನಾವು ಈಗ ನಿಯಮಗಳನ್ನು ಸಡಿಲಿಸಲು ಬರುವುದಿಲ್ಲ. ಒಬ್ಬರಿಗೆ ಸಹಾಯ ಮಾಡಲು ನಿಯಮ ಸಡಿಲಿಸಲು ಹೋದರೆ ಅದರ ದುರುಪಯೋಗವೂ ಆಗುವ ಸಾಧ್ಯತೆಗಳಿರುತ್ತದೆ. ಅವರು ಪದವಿ ಓದಲು ಏನೂ ತೊಂದರೆಯಿಲ್ಲ. ಅವರು ಬಿ.ಎಸ್ಸಿ ಗೆ ಅಡ್ಮಿಷನ್ ಆಗಲು ನಿಯಮ ಅಡ್ಡಿ ಬರುವುದಿಲ್ಲ. ಆದರೆ C.E.T. ನಲ್ಲಿ ಉಚಿತವಾದ ಸರ್ಕಾರಿ ಸೀಟು ಪಡೆಯಲು ಮಾತ್ರ ಈ ನಿಯಮ ಅಡ್ಡಿ ಬರುತ್ತದೆ. ಹಾಗಾಗಿ, ಮಾನವೀತೆಯ ದೃಷ್ಟಿಯಿಂದ ನಾವು ಯಾವುದಾದರೂ ಖಾಸಗಿ ನೆಲೆಯಲ್ಲಿ ಮಾತುಕತೆ ನಡೆಸಿ ಯಾವುದಾದರೊಂದು ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟು ಕೊಡಿಸುವಂಥ ಪ್ರಯತ್ನವನ್ನು ಮಾಡಬಹುದು. ಆದರೆ ಒಬ್ಬರಿಗೆ ಅನುಕೂಲ ಮಾಡಲು ನಿಯಮಗಳನ್ನು ಸಡಿಲಿಸಲು ಹೋದರೆ ಅದರ ದುರುಪಯೋಗವಾಗುವ ಸಾಧ್ಯತೆ ಇರುವುದರಿಂದ ನಿಯಮ ಸಡಿಲಿಸಲು ಆಗುವುದಿಲ್ಲ.

8. ವಿಷಯ: ಮಾನ್ಯ ಸದಸ್ಯರಾದ ಶ್ರೀ ಚಿಕ್ಕಣ್ಣನವರ ಹಕ್ಕುಚ್ಯುತಿ ಬಗ್ಗೆ

ಶ್ರೀ ಸಿ.ಎಂ. ಉದಾಸಿ : (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಚಿಕ್ಕಣ್ಣನವರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ವರದಿ ತರಿಸಿದು, ಅಮಾನತ್ತಿಗೆ ನಾವು ಸೂಚನೆಯನ್ನು ಕೊಟ್ಟು ನಾಳೆ ಅಮಾನತ್ತು ಮಾಡುತ್ತೇವೆ ಎಂದು ಹೇಳಲು ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಸಸ್ಪೆಂಡ್ ಮಾಡಲು ತೀರ್ಮಾನ ಮಾಡಿರುವಿರಾ? ಹಾಗಿದ್ದರೆ ಆರ್ಡರ್ಸ್ ಇಷ್ಯೂ ಮಾಡಿಬಿಡಿ. ಅರ್ಡರ್ ಇಷ್ಯೂ ಮಾಡಲು ಒಂದು ವಾರ ಮಾಡುವುದಕ್ಕೆ ಹೋಗಬೇಡಿ. ಇವತ್ತೇ ಇಷ್ಯೂ ಮಾಡಿಬಿಡಿ.

ಶ್ರೀ ಸಿ.ಎಂ. ಉದಾಸಿ : ನಾಳೆ ಮಾಡುತ್ತೇವೆ.